ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/ರೋ/ರೇಂ.ಶಿಬಿರ–120/2026–27 - 1452 . ದಿನಾಂಕ: 04.11.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,
ಜಿಲ್ಲಾ ಸಂಸ್ಥೆ, ಕರ್ನಾಟಕ.

ಮಾನ್ಯರೆ,

ವಿಷಯ:– ವಿಶ್ವ ಯುವ ಸಮ್ಮೇಳನ – 2026 ಕಾರ್ಯಕ್ರಮಕ್ಕೆ ಆಸಕ್ತ ರೋವರ್ಸ್–ರೇಂಜರ್ಸ್‌ಗಳನ್ನು ನಿಯೋಜಿಸುವಂತೆ ಕೋರಿ.

******

ಶ್ರೀ. ಮಧುಸೂದನ್ ಸಾಯಿರವರು, ಆಧ್ಯಾತ್ಮಿಕ ನಾಯಕರು, ಶ್ರೀ. ಸತ್ಯಸಾಯಿ ಸಂಸ್ಥೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ದಿನಾಂಕ: 24 ರಿಂದ 28 ನವೆಂಬರ್ 2026ರ ವರೆಗೆ ಶ್ರೀ. ಸತ್ಯಸಾಯಿ ನಗರ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ **ವಿಶ್ವ ಯುವ ಸಮ್ಮೇಳನವನ್ನು** ಆಯೋಜಿಸಿದ್ದು, ಈ ವಿಶ್ವ ಯುವ ಸಮ್ಮೇಳನವು ಸತ್ಯ, ಧರ್ಮಾಚರಣೆ, ಶಾಂತಿ, ಪ್ರೀತಿ ಮತ್ತು ಅಹಿಂಸೆ ಎಂಬ ಐದು ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನು ಯುವಕರಲ್ಲಿ ಅಳವಡಿಸಿಕೊಳ್ಳಲು ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಮೂಲಕ ವೈಯಕ್ತಿಕ ಪರಿವರ್ತನೆಯನ್ನು ಸಾಧಿಸುವುದು ಹಾಗೂ ಆ ಮೌಲ್ಯಗಳನ್ನು ಕುಟುಂಬ, ಸಮುದಾಯ, ಸಮಾಜ ಮತ್ತು ವಿಶ್ವದಲ್ಲಿ ಅನುಷ್ಠಾನಗೊಳಿಸಿ ಸಕಾರಾತ್ಮಕ ಸಾಮಾಜಿಕ ಪರಿವರ್ತನೆಗೆ ಪ್ರೇರಣೆ ನೀಡುವುದೇ ಈ ಸಮ್ಮೇಳನದ ಪ್ರಮುಖ ಉದ್ದೇಶವೆಂದು ತಿಳಿಸಿ, ಈ ಸಮ್ಮೇಳನಕ್ಕೆ ನಮ್ಮ ಸಂಸ್ಥೆಯಿಂದ 100 ರೋವರ್ಸ್–ರೇಂಜರ್ಸ್‌ಗಳನ್ನು ನಿಯೋಜಿಸುವಂತೆ ಕೋರಿರುತ್ತಾರೆ.

ಸದರಿ ಸಮ್ಮೇಳನದಲ್ಲಿ ಪ್ರತಿದಿನ ಒಂದು ಮಾನವೀಯ ಮೌಲ್ಯಕ್ಕೆ ವಿಶೇಷ ಆದ್ಯತೆ ನೀಡಲಾಗುವುದು. ಆ ಮೌಲ್ಯವನ್ನು ವ್ಯಕ್ತಿಯ ಅಂತರಂಗ ಮತ್ತು ಬಹಿರಂಗದಲ್ಲಿ ಹೇಗೆ ಬೆಳೆಸಿಕೊಳ್ಳಬಹುದು ಹಾಗೂ ನಮ್ಮ ಸಂಬಂಧಗಳು, ಸಮುದಾಯಗಳು, ಸಮಾಜ ಮತ್ತು ವಿಶ್ವದಲ್ಲಿ ಅದನ್ನು ಹೇಗೆ ಅನುಷ್ಠಾನಗೊಳಿಸಬಹುದು ಎಂಬುದರ ಕುರಿತು ಚರ್ಚಿಸಲಾಗುವುದು. ಆದ್ದರಿಂದ, ಈ ಸಮಾವೇಶವು ನಮ್ಮ ರೋವರ್ಸ್–ರೇಂಜರ್ಸ್‌ಗಳಿಗೆ ಹೆಚ್ಚು ಉಪಯುಕ್ತವಾಗುವುದರಿಂದ ಎಲ್ಲಾ ಜಿಲ್ಲೆಗಳಿಂದ ರೋವರ್–ರೇಂಜರ್ಸ್‌ಗಳನ್ನು ನಿಯೋಜಿಸಲು ಕೋರಲಾಗಿದೆ. ಸಮ್ಮೇಳನದ ವಿವರಗಳು ಈ ಕೆಳಕಂಡಂತಿವೆ.

ಶಿಬಿರ	ವಿಶ್ವ ಯುವ ಸಮ್ಮೇಳನ – World Youth Meet 2026
ಸ್ಥಳ	ಶ್ರೀ. ಸತ್ಯಸಾಯಿ ನಗರ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ
ದಿನಾಂಕ	24 ರಿಂದ 28 ನವೆಂಬರ್ 2026ರ ವರೆಗೆ
ವರದಿ ಮಾಡುವ ದಿನಾಂಕ:	23.11.2026 ಸಂಜೆ ಉದ್ಘಾಟನಾ ಸಮಾರಂಭ
ಬಿಡುಗಡೆ ಮಾಡುವ ದಿನಾಂಕ:	29.11.2026 ಬೆಳಗ್ಗೆ ಮುಕ್ತಾಯ ಸಮಾರಂಭದ ನಂತರ
ಶಿಬಿರ ಶುಲ್ಕ	ಯಾವುದೇ ಶಿಬಿರ ಶುಲ್ಕ ಇರುವುದಿಲ್ಲ.
ಧ್ಯೇಯ ವಾಕ್ಯ (Theme)	ಅಂತರಂಗ ಮತ್ತು ಬಹಿರಂಗ (Within and Without)
ಸಂಘಟಿಸುವ ಕಾರ್ಯಕ್ರಮಗಳು	**ದಿನಾಂಕ: 24.11.2026ರಂದು** **ಮಾನವೀಯ ಮೌಲ್ಯ:** ಸತ್ಯ (Truth) **ಅಂತರಂಗ:** ತನ್ನೊಂದಿಗೆ ತಾನು ಸತ್ಯವಂತನಾಗಿರುವುದು (Being True to Yourself) – ಸ್ವಂತ ಗುರುತನ್ನು ಅರಿತುಕೊಳ್ಳುವುದು. – ಸ್ವಯಂ ಅರಿವನ್ನು ಬೆಳೆಸಿಕೊಳ್ಳುವುದು. – ನಾನು ನಿಜವಾಗಿಯೂ ಯಾರು ಎಂಬುದನ್ನು ತಿಳಿದುಕೊಳ್ಳುವುದು.

ಬಹಿರಂಗ: ಜಗತ್ತಿನಲ್ಲಿ ಪ್ರಾಮಾಣಿಕತೆಯಿಂದ ಬದುಕುವುದು (Being Authentic in the World)
– ಸಂಬಂಧಗಳಲ್ಲಿ ಪ್ರಾಮಾಣಿಕತೆಯನ್ನು ಕಾಪಾಡಿಕೊಳ್ಳುವುದು.
– ಸಾಮಾಜಿಕ ಮಾಧ್ಯಮಗಳು ಮತ್ತು ಡಿಜಿಟಲ್ ಜಗತ್ತಿನಲ್ಲಿ ನೈಜತೆ ಹಾಗೂ ಪ್ರಾಮಾಣಿಕತೆಯಿಂದ ವರ್ತಿಸುವುದು.

ದಿನಾಂಕ: 25.11.2026ರಂದು
ಮಾನವೀಯ ಮೌಲ್ಯ: ಧರ್ಮಾಚರಣೆ (Right Conduct)
ಅಂತರಂಗ: ಸರಿಯಾದ ಆಯ್ಕೆಗಳು (Right Choices)
– ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವುದು.
– ಉತ್ತಮ ಚಾರಿತ್ರ್ಯವನ್ನು ಬೆಳೆಸಿಕೊಳ್ಳುವುದು.
– ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದು.
ಬಹಿರಂಗ: ಜವಾಬ್ದಾರಿಯುತ ಜೀವನ (Responsible Living)
– ನಮ್ಮ ಆಯ್ಕೆಗಳು ಮತ್ತು ನಿರ್ಧಾರಗಳು ಕುಟುಂಬ, ಕೆಲಸದ ಸ್ಥಳ, ಸಮಾಜ ಹಾಗೂ ರಾಷ್ಟ್ರದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಅರಿತುಕೊಳ್ಳುವುದು.

ದಿನಾಂಕ: 26.11.2026ರಂದು
ಮಾನವೀಯ ಮೌಲ್ಯ: ಶಾಂತಿ (Peace)
ಅಂತರಂಗ: ಆಂತರಿಕ ಶಾಂತಿ (Peace Within)
– ಮನಸ್ಸನ್ನು ನಿಯಂತ್ರಿಸುವುದು.
– ಭಾವನೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.
– ಒತ್ತಡ ಮತ್ತು ಆಂತರಿಕ ಸಂಘರ್ಷಗಳನ್ನು ನಿಭಾಯಿಸುವುದು.
– ಮನಸ್ಸಿನಲ್ಲಿ ಶಾಂತಿಯನ್ನು ಬೆಳೆಸಿಕೊಳ್ಳುವುದು.
ಬಹಿರಂಗ: ನಮ್ಮ ಸುತ್ತಮುತ್ತಲಿನ ಶಾಂತಿ (Peace Around Us)
– ಸಂಬಂಧಗಳಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಮೂಡಿಸುವುದು.
– ಪರಸ್ಪರ ತಿಳುವಳಿಕೆಯನ್ನು ಬೆಳೆಸುವುದು.
– ಸಮಾಜದಲ್ಲಿ ಸಾಮರಸ್ಯ ಮತ್ತು ಸೌಹಾರ್ದತೆಯನ್ನು ಸ್ಥಾಪಿಸುವುದು.

ದಿನಾಂಕ: 27.11.2026ರಂದು
ಮಾನವೀಯ ಮೌಲ್ಯ: ಪ್ರೀತಿ (Love)
ಅಂತರಂಗ: ನಮ್ಮೊಳಗಿನಿಂದ ಪ್ರಾರಂಭವಾಗುವ ಪ್ರೀತಿ (Love That Begins Within)
– ಸಹಾನುಭೂತಿಯನ್ನು ಬೆಳೆಸಿಕೊಳ್ಳುವುದು.
– ಇತರರನ್ನು ಒಪ್ಪಿಕೊಳ್ಳುವ ಮನೋಭಾವವನ್ನು ಹೊಂದುವುದು.
– ಕರುಣೆ ಮತ್ತು ದಯೆಯನ್ನು ಬೆಳೆಸಿಕೊಳ್ಳುವುದು.
– ನಿಸ್ವಾರ್ಥ ಪ್ರೀತಿಯನ್ನು ರೂಢಿಸಿಕೊಳ್ಳುವುದು.
ಬಹಿರಂಗ: ಎಲ್ಲರನ್ನೂ ಬೆಸೆಯುವ ಪ್ರೀತಿ (Love That Connects)
– ವಿಭಿನ್ನ ಸಂಸ್ಕೃತಿಗಳು, ಧರ್ಮಗಳು ಮತ್ತು ರಾಷ್ಟ್ರೀಯತೆಗಳ ನಡುವಿನ ಭಿನ್ನತೆಗಳನ್ನು ಮೀರಿ ಉತ್ತಮ ಸಂಬಂಧಗಳನ್ನು ಬೆಳೆಸುವುದು.
– ಪ್ರೀತಿ, ಪರಸ್ಪರ ಗೌರವ ಮತ್ತು ಒಗ್ಗಟ್ಟಿನ ಮೂಲಕ ಜನರನ್ನು ಒಂದಾಗಿಸುವುದು.

	ದಿನಾಂಕ: 28.11.2026ರಂದು **ಮಾನವೀಯ ಮೌಲ್ಯ:** ಅಹಿಂಸೆ (Non-Violence) **ಅಂತರಂಗ:** ದೈನಂದಿನ ಜೀವನದಲ್ಲಿ ಜಾಗೃತಿ (Awareness in Everyday Living) – ಆಲೋಚನೆ, ಮಾತು ಮತ್ತು ಕಾರ್ಯಗಳಲ್ಲಿ ಜಾಗರೂಕತೆಯನ್ನು ಬೆಳೆಸಿಕೊಳ್ಳುವುದು. – ದೈನಂದಿನ ಜೀವನಶೈಲಿಯಲ್ಲಿ ಅಹಿಂಸಾ ತತ್ವವನ್ನು ಅನುಸರಿಸುವುದು. – ಪ್ರತಿಯೊಂದು ಕ್ರಿಯೆಯಲ್ಲಿಯೂ ಪ್ರಜ್ಞಾಪೂರ್ವಕವಾಗಿ ವರ್ತಿಸುವುದು. **ಬಹಿರಂಗ:** ಜಾಗೃತಿಯಿಂದ ಕಾರ್ಯರೂಪಕ್ಕೆ (From Awareness to Action) – ಸೇವಾ ಮನೋಭಾವವನ್ನು ಬೆಳೆಸಿಕೊಳ್ಳುವುದು. – ಜವಾಬ್ದಾರಿಯುತ ಜೀವನವನ್ನು ನಡೆಸುವುದು. – ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವುದು. – ಭೂಮಿಯ ಮತ್ತು ಪರಿಸರದ ಸಂರಕ್ಷಣೆಗಾಗಿ ಕಾರ್ಯನಿರ್ವಹಿಸುವುದು.
ಕೋಟಾ	ಪ್ರತಿ ಜಿಲ್ಲೆಯಿಂದ 2 ರೋವರ್ಸ್ ಮತ್ತು 2 ರೇಂಜರ್ಸ್
ಪ್ರಯಾಣ ಭತ್ಯೆ	ಭಾಗವಹಿಸುವ ರೋವರ್ಸ್–ರೇಂಜರ್ಸ್‌ಗಳು ಹೋಗಿ ಬರುವ ಪ್ರಯಾಣ ಭತ್ಯೆಯನ್ನು ಆಯಾಯ ಕಾಲೇಜು ನಿಧಿಯಿಂದ ಭರಿಸಿಕೊಳ್ಳುವುದು.
ಊಟ & ವಸತಿ ವ್ಯವಸ್ಥೆ	ಶ್ರೀ. ಸತ್ಯಸಾಯಿ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದವರ ಸಂಖ್ಯೆ	1. ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಎಸ್‌ಒಸಿ, ಪ್ರಭಾರಿ ರೇಂಜರಿಂಗ್ ವಿಭಾಗ – 7259115730 2. ಶ್ರೀಮತಿ ಮಂಜುಳ. ಸಿ, ರಾಜ್ಯ ಸಂಘಟನಾ ಆಯುಕ್ತರು(ಗೈ)– 9482433516/ 9844366941 3. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು(ಗೈ)– 9448914540

ಆದ್ದರಿಂದ, ಮೇಲ್ಕಂಡ ಶಿಬಿರಕ್ಕೆ ತಮ್ಮ ಜಿಲ್ಲೆಯಿಂದ **ಆಸಕ್ತ 02 ರೋವರ್ಸ್** ಮತ್ತು **02 ರೇಂಜರ್ಸ್‌ಗಳನ್ನು** ನಿಯೋಜಿಸಿ, ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ. ತಮ್ಮ ಜಿಲ್ಲೆಯಿಂದ ಭಾಗವಹಿಸುತ್ತಿರುವ ರೋವರ್ಸ್–ರೇಂಜರ್ಸ್‌ಗಳ ವಿವರವನ್ನು ದಿನಾಂಕ:18.11.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ಕಳುಹಿಸುವಂತೆ ವಿನಂತಿಸಿದೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

ಪ್ರತಿಯನ್ನು :

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ